

# ಚೇಳುಗಳ ರಾಣಿ!




ಅವಳ ಹೆಸರು ಕಾಂಚನಾ ಕೇಟಕಿ. ವಿಷಪೂರಿತ ಚೇಳುಗಳೊಂದಿಗಿನ ಅವಳ ಸ್ನೇಹ ಅನನ್ಯ. ಆ ಮೂಲಕವೇ ಅವಳು ಎರಡು ವಿಶ್ವ ದಾಖಲೆಗಳನ್ನು ನಿರ್ಮಿಸಿ ಗಿನ್ನೆಸ್ ಪುಸ್ತಕದಲ್ಲಿ ದಾಖಲಾಗಿದ್ದಾಳೆ.

ಥಾಯ್ಲೆಂಡ್ ದೇಶದ ಪಟ್ಟಾಯಾ ಎಂಬ ಪಟ್ಟಣ, ಕ್ಯಾಬರೆ ಹಾಗೂ ಮನರಂಜನಾ ರಾತ್ರಿಗಳಿಗೆ ವಿಶ್ವವಿಖ್ಯಾತವಾಗಿದೆ. ಅಲ್ಲಿರುವ 'ರಿಪ್ಲೇಸ್ ಬಿಲೀವ್ ಇಟ್ ಆರ್ ನಾಟ್' ಎಂಬ ಅದ್ಭುತಗಳ ಪ್ರದರ್ಶಕ ತಾಣವೂ ಅಷ್ಟೇ ಪ್ರಸಿದ್ಧವಾಗಿದೆ. ಅಲ್ಲಿಯೇ ಚೇಳುಗಳ ರಾಣಿ ಕಾಂಚನಾ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದಾಳೆ.

ಕಾಂಚನಾಳ ಮುಖದ ಮೇಲೆ ಹತ್ತಾರು ವಿಷಪೂರಿತ ಚೇಳುಗಳು ಓಡಾಡುತ್ತವೆ. ಅವಳು ಎಷ್ಟು ನಿರ್ಭಯವಾಗಿ ಹಾಗೂ ಶಾಂತಳಾಗಿ ಇರುತ್ತಾಳೆಂದರೆ ಆಗೆಲ್ಲ ಅವಳು ತನ್ನ ಕಣ್ಣು ರೆಪ್ಪೆಗಳನ್ನೂ ಬಡಿಯುವುದಿಲ್ಲ. ಚೇಳುಗಳೂ ಅಷ್ಟೇ ನಿರ್ಭಯವಾಗಿ ಅವಳ ದೇಹದ ಮೇಲೆಲ್ಲಾ ಓಡಾಡುತ್ತವೆ. ಆ ದೃಶ್ಯವನ್ನು ನೋಡಿದ ಥಾಯ್ಲೆಂಡ್ ದೇಶದ ಜನ ಅವಳನ್ನು 'ಚೇಳುಗಳ ರಾಣಿ' ಎಂದು ಗುರುತಿಸುತ್ತಿದ್ದಾರೆ.

ಕಾಂಚನಾ ತನ್ನ ಬಾಯಲ್ಲಿ ಒಂದು ಚೇಳನ್ನು 3 ನಿಮಿಷ 28 ಸೆಕಂಡುಗಳ ಕಾಲ ಇಟ್ಟುಕೊಂಡು ಮೊದಲ ಗಿನ್ನೆಸ್ ದಾಖಲೆ ನಿರ್ಮಿಸಿದ್ದಾಳೆ. 12 ಚದುರ ಅಡಿ ವಿಸ್ತಾರದ ಗಾಜಿನ ಕೋಣೆಯೊಂದರಲ್ಲಿ, 5 ಸಾವಿರ ಜೀವಂತ ಚೇಳುಗಳೊಂದಿಗೆ 33 ದಿನಗಳನ್ನು ಕಳೆದು ಎರಡನೆಯ ದಾಖಲೆಗೆ ಕಾರಣಳಾಗಿದ್ದಾಳೆ.

ಜಗತ್ತಿನಲ್ಲಿ ಸುಮಾರು 2 ಸಾವಿರ ಜಾತಿಯ ಚೇಳುಗಳಿವೆಯಂತೆ. ಅವುಗಳಲ್ಲಿ 40 ಪ್ರಕಾರದ ಚೇಳುಗಳು ಅತ್ಯಂತ ವಿಷಪೂರಿತ. ಅವು ತಮ್ಮ ಕುಟುಕುವಿಕೆಯಿಂದ ಮನುಷ್ಯನ ಪ್ರಾಣವನ್ನೇ ಹೀರಬಲ್ಲವು. ಅವು ಸಣ್ಣ ಪುಟ್ಟ ಕೀಟ, ಇಲಿಗಳನ್ನು ತಿಂದು ಜೀವಿಸುತ್ತವೆ. ಅವು ಏನನ್ನೂ ತಿನ್ನದೇ ಕುಡಿಯದೇ ಒಂದು ವರ್ಷ ಜೀವಂತ ಇರಬಲ್ಲವು ಎಂಬುದೊಂದು ವಿಶೇಷ. 6 ಕಾಲಿನ ಚೇಳುಗಳಿಗೆ 12 ಕಣ್ಣುಗಳು ಇರುತ್ತವೆಯಂತೆ. ಆದರೂ ಅವು ಸ್ಪಷ್ಟವಾಗಿ ಏನನ್ನೂ ನೋಡಲಾರವು. ವಾಸನೆಯಿಂದಲೇ ಅವು ತಮ್ಮ ಬೇಟೆಯನ್ನು ಗುರುತಿಸಿ ಹಿಡಿಯುತ್ತವೆ. ಕಾಂಚನಾಳ ಅದಾವ ವಾಸನೆಗೆ ಇವು ಸೆರೆಯಾಗಿ ಸ್ನೇಹಿತರಾಗಿವೆಯೋ ಗೊತ್ತಿಲ್ಲ.

■ ಸುಭಾಸ ಯಾದವಾಡ

